Phone : 0836-2215328

ದೂರವಾಣಿ : 0836-2215328

NAAC Accredited with "A" Grade-2014

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

KARNATAK UNIVERSITY, DHARWAD

ಶಿಷ್ಯವೇತನ ವಿಭಾಗ

SCHOLARSHIP SECTION

Pavate Nagar, Dharwad-580 003

ಪಾವಟೆನಗರ, ಧಾರವಾಡ- 580003

Karnatak-India

Website: www.kud.ac.in Fax: 91-0836-2446601

ಕರ್ನಾಟಕ - ಭಾರತ

No.KU/Sch/2023/249

Date: 18 JUL 2023

# ಸುತ್ತೋಲೆ

ವಿಷಯ :- ಸನ್ 2023-24ನೇ ಸಾಲಿಗೆ ನವಲಗುಂದ ಶಿರಸಂಗಿ ಟ್ರಸ್ಟ್ ಬೆಳಗಾವಿ ವತಿಯಿಂದ ವಿದ್ಯಾರ್ಥಿಗಳಿಗೆ ಸಾಲರೂಪದ ವಿದ್ಯಾರ್ಥಿ ವೇತನ ನೀಡುವ ಕುರಿತು.

ಉಲ್ಲೇಖ : ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು ನವಲಗುಂದ ಶಿರಸಂಗಿ ಟ್ರಸ್ಟ ಬೆಳಗಾವಿ ಇವರ ಪತ್ರ ಸಂಖ್ಯೆ:ಎನ್.ಎಸ್.ಟಿ.ಸಿಆರ್.04/2023-24 ದಿನಾಂಕ: 23-06-2023

*******

ನವಲಗುಂದ ಶಿರಸಂಗಿ ಟ್ರಸ್ಟ್ ಬೆಳಗಾವಿ ಇವರಿಂದ ಸನ್ 2023-24 ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಪ್ರತಿಶತ 55% ಕ್ಕಿಂತ ಹೆಚ್ಚಿಗೆ ಅಂಕಗಳನ್ನು ಪಡೆದ ಲಿಂಗಾಯತ ವಿದ್ಯಾರ್ಥಿಗಳಿಗೆ ಸಾಲರೂಪದ ವಿದ್ಯಾರ್ಥಿವೇತನವನ್ನು ಮಂಜೂರು ಮಾಡುವ ಕುರಿತು ಅರ್ಹ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕಾರಣ ಆಸಕ್ತಿಯುಳ್ಳ ವಿದ್ಯಾರ್ಥಿಗಳು ಸದರಿ ವಿದ್ಯಾರ್ಥಿವೇತನವನ್ನು ಪಡೆಯಲು ಇಚ್ಛಿಸಿದಲ್ಲಿ ಈ ಸುತ್ತೋಲೆಯೊಂದಿಗೆ ಲಗತ್ತಿಸಿದ ಮಾಹಿತಿಯನ್ನು ವಿಶ್ವವಿದ್ಯಾಲಯದ ಜಾಲತಾಣದಿಂದ (www.kud.ac.in) ಪಡೆಯಬಹುದಾಗಿದೆ.

ಸದರಿ ಮಾಹಿತಿಯನ್ನು ವಿದ್ಯಾರ್ಥಿಗಳ ಗಮನಕ್ಕೆ ತರಲು ವಿಭಾಗದ ಸೂಚನಾ ಫಲಕಕ್ಕೆ ಲಗತ್ತಿಸುವಂತೆ ಅಗತ್ಯ ಕ್ರಮ ವಹಿಸಬೇಕೆಂದು ಈ ಮೂಲಕ ತಿಳಿಸಲಾಗಿದೆ.

ಕುಲಸಚಿವರು

ಪ್ರತಿ ಸಾದರ ಪೂರ್ವಕವಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ:

1. ಅಧ್ಯಕ್ಷರು, ಎಲ್ಲ ಸ್ನಾತಕೋತ್ತರ ವಿಭಾಗಗಳು, ಕ.ವಿ.ವಿ.ಧಾರವಾಡ
2. ಆಡಳಿತಾಧಿಕಾರಿಗಳು, ಸ್ನಾತಕೋತ್ತರ ಕೇಂದ್ರ ಕಾರವಾರ, ಹಾವೇರಿ, ಗದಗ,
3. ಪ್ರಾಚಾರ್ಯರು, ಎಲ್ಲ ಘಟಕ ಮಹಾವಿದ್ಯಾಲಯಗಳು, ಕ.ವಿ.ವಿ.ಧಾರವಾಡ
4. ನಿರ್ದೇಶಕರು, ವಿದ್ಯಾರ್ಥಿ ಕಲ್ಯಾಣ ವಿಭಾಗ, ಕ.ವಿ.ವಿ.ಧಾರವಾಡ.
5. ಪ್ರತಿ ಸಾದರ ಪೂರ್ವಕವಾಗಿ, ಜಿಲ್ಲಾಧಿಕಾರಿಗಳು ಹಾಗೂ ಆಡಳಿತಾಧಿಕಾರಿಗಳು ನವಲಗುಂದ ಶಿರಸಂಗಿ ಟ್ರಸ್ಟ ಬೆಳಗಾವಿ, ಹಳೆ ಜಿಲ್ಲಾ ಪಂಚಾಯತಿ ಕಟ್ಟಡ, ಕೋರ್ಟ ಆವರಣ, ಬೆಳಗಾವಿ ಇವರ ಮಾಹಿತಿಗಾಗಿ.
6. ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ವಿಭಾಗ, ಕ.ವಿ.ವಿ.ಧಾರವಾಡ.




# ಸರ್‌ದೇಸಾಯಿ ನವಲಗುಂದ ಶಿರಸಂಗಿ ಚಾರಿಟೇಬಲ್ ಟ್ರಸ್ಟ ಪಂಥ ಕಮೀಟಿ

ಹಳೆ ಜಿಲ್ಲಾ ಪಂಚಾಯತ ಕಟ್ಟಡ, ಕೋರ್ಟ ಆವರಣ, ಬೆಳಗಾವಿ–590001

ಫೋನ ನಂ: 0831–2425841 Email :- nstbgm10@gmail.com


ಕ್ರ.ಸಂ.ಎನ್.ಎಸ್.ಟಿ.ಸಿ.ಆರ್–04/2023–24 ದಿನಾಂಕ :23/6/2023

ಗೆ,

ಪ್ರಾಚಾರ್ಯರು,

**The Hon`ble Registrar**
**Karnataka University Dharwad.**

KARNATAK UNIVERSITY DHARWAD-3
08 JUL 2023
Inward No. 704

Registrar Secretariat
No: A...792 Date 11 JUL 2023

ತ್ಯಾಗವೀರ ಲಿಂಗರಾಜರು



1861–1906

ಮಹನೀಯರೆ,

ವಿಷಯ:–ಲಿಂಗಾಯತ ವಿದ್ಯಾರ್ಥಿಗಳಿಗೆ ಸಾಲರೂಪದ ಶಿಷ್ಯವೇತನ ಮಂಜೂರಿಗೆ ಅರ್ಜಿಗಳ ಆಹ್ವಾನ.

ನವಲಗುಂದ ಶಿರಸಂಗಿ ಟ್ರಸ್ಟ ಬೆಳಗಾವಿ ಇದರ ವತಿಯಿಂದ ಸಾಲರೂಪದ ವಿದ್ಯಾರ್ಥಿ ವೇತನವನ್ನು ಪ್ರತಿ ವರ್ಷದಂತೆ ಈ ವರ್ಷ ಕೂಡ ಅಂದರೆ ಸನ್ 2023–24 ನೇ ಸಾಲಿನ ಶೈಕ್ಷಣಿಕ ವರ್ಷಕ್ಕಾಗಿ ಮಂಜೂರು ಮಾಡುವ ಕುರಿತು ಅರ್ಹ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಕರೆಯಲಾಗಿದೆ. ಅರ್ಜಿ ತೆಗೆದುಕೊಳ್ಳಲು ಇಚ್ಛುಕ ವಿದ್ಯಾರ್ಥಿಗಳು ಲಿಂಗಾಯತ ಜಾತಿಯವರು ಇರತಕ್ಕದ್ದು ಹಾಗು ಕಳೆದ ವರ್ಷ ಕನಿಷ್ಟ 55% ಅಂಕ ಪಡೆದಿರಬೇಕು. ಕಳೆದ ವರ್ಷ ಒಂದು ವೇಳೆ ಸದರಿ ವಿದ್ಯಾರ್ಥಿ ನಮ್ಮ ಟ್ರಸ್ಟಿನ ಸಾಲರೂಪದ ವಿದ್ಯಾರ್ಥಿ ವೇತನ ಪಡೆದಿದ್ದಲ್ಲಿ ಈಗ ಮತ್ತೆ ಸದರಿ ಸಾಲರೂಪದ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸುತ್ತಿದ್ದಲ್ಲಿ ಅಂಥವರು ಕಳೆದ ವರ್ಷ ಕನಿಷ್ಟ 60% ಅಂಕ ಪಡೆದಿರುವಂತಹ ನಿಮ್ಮ ಮಹಾವಿದ್ಯಾಲಯದಲ್ಲಿ ವಿದ್ಯಾರ್ಜನೆಗೈಯುತ್ತಿರುವ ಇಚ್ಛೆಯುಳ್ಳ ವಿದ್ಯಾರ್ಥಿಗಳು ಅಧಿಕೃತ ಅರ್ಜಿಯ ನಮೂನೆಯಲ್ಲಿ ಪೂರ್ಣ ಮಾಹಿತಿಯೊಂದಿಗೆ ಅರ್ಜಿಗಳನ್ನು ದಿನಾಂಕ 30/09/2023 ಒಳಗಾಗಿ ನಮ್ಮ ಕಾರ್ಯಾಲಯಕ್ಕೆ ತಮ್ಮ ಮುಖಾಂತರ ಕಳುಹಿಸಬಹುದಾಗಿದೆ. ಈ ರೀತಿ ಪಡೆದ ವಿದ್ಯಾರ್ಥಿ ವೇತನವನ್ನು 10 ವರ್ಷಗಳಲ್ಲಿ ಒಂದುವರೆ ಪಟ್ಟು ಮರಳಿ ಕಟ್ಟಬೇಕಗುತ್ತದೆ. ಇದರ ಜೊತೆಗೆ ಅವಶ್ಯಕ ಕರಾರುಗಳ ಯಾದಿಯನ್ನು ಮಾಹಿತಿಗಾಗಿ ಕಳುಹಿಸಿದೆ. ಅಧಿಕೃತ ಅರ್ಜಿ ನಮೂನೆಗಳು ನಮ್ಮ ಕಾರ್ಯಾಲಯದಲ್ಲಿ ಲಭ್ಯವಿದ್ದು, ಸದರಿ ಅರ್ಜಿಯ ಬೆಲೆ 50/– (ಐವತ್ತು ರೂಪಾಯಿಗಳು) ಮಾತ್ರ ಟ್ರಸ್ಟ ಕಾರ್ಯಾಲಯದಲ್ಲಿ ಹಣ ಸಂದಾಯ ಮಾಡಿ ಇಲ್ಲವೇ ಜಿಲ್ಲಾಧಿಕಾರಿಗಳು ಮತ್ತು ಆಡಳಿತಾಧಿಕಾರಿಗಳು ನವಲಗುಂದ ಶಿರಸಂಗಿ ಟ್ರಸ್ಟ ಬೆಳಗಾವಿ ಇವರ ಹೆಸರಿನಲ್ಲಿ ಮನಿಯಾರ್ಡರ (Post Office) ಮುಖಾಂತರ ಸಲ್ಲಿಸಿ ಅರ್ಜಿಗಳನ್ನು ಪಡೆಯಬಹುದಾಗಿದೆ.

ಈ ಪತ್ರದಲ್ಲಿಯ ಎಲ್ಲ ವಿಷಯಗಳನ್ನು ತಮ್ಮ ಮಹಾವಿದ್ಯಾಲಯದಲ್ಲಿ ವಿದ್ಯಾರ್ಜನೆಗೈಯುತ್ತಿರುವ ಎಲ್ಲ ಲಿಂಗಾಯತ ವಿದ್ಯಾರ್ಥಿಗಳಿಗೆ ತಿಳಿಸಿ ಪ್ರಸಿದ್ಧ ಪಡಿಸಬೇಕಾಗಿ ವಿನಂತಿ. ಇದರ ಜೊತೆಗೆ ಜಾಹೀರಾತಿನ ಎರಡು ಪ್ರತಿ ಲಗತ್ತಿಸಿದೆ. ಈ ಪತ್ರದ ಪ್ರತಿ ಹಾಗೂ ಒಂದು ಜಾಹೀರಾತನ್ನು ತಮ್ಮ ಸಂಸ್ಥೆಯ ನೋಟೀಸು ಬೋರ್ಡಿಗೆ ಹಾಕಲು ಮತ್ತು ಒಂದು ಪ್ರತಿ ತಮ್ಮ ಕಾರ್ಯಾಲಯದ ದಾಖಲೆಗಾಗಿ ಇಟ್ಟುಕೊಳ್ಳಲು ಕೋರಿದೆ.

Scholarship
11/7

ತಮ್ಮ ವಿಶ್ವಾಸಿ

Patil

ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು
ನವಲಗುಂದ ಶಿರಸಂಗಿ ಟ್ರಸ್ಟ ಬೆಳಗಾವಿ

ನವಲಗುಂದ ಶಿರಸಂಗಿ ಲಿಂಗರಾಜ ಟ್ರಸ್ಟ
ಬೆಳಗಾವಿ

# ಸರ್‌ದೇಸಾಯಿ ನವಲಗುಂದ ಶಿರಸಂಗಿ ಚಾರಿಟೇಬಲ್ ಟ್ರಸ್ಟ ಪಂಥ ಕಮೀಟಿ

ಹಳೆ ಜಿಲ್ಲಾ ಪಂಚಾಯತ ಕಟ್ಟಡ, ಕೋರ್ಟ ಆವರಣ, ಬೆಳಗಾವಿ–590001

ಫೋನ ನಂ: 0831–2425841 Email :- nstbgm10@gmail.com


ಕ್ರ.ಸಂ.ಎನ್.ಎಸ್.ಟಿ.ಸಿ.ಆರ್–04/2023–24 ದಿನಾಂಕ :23/6 /2023

**:ಕರಾರುಗಳು:**

1) ನವಲಗುಂದ ಶಿರಸಂಗಿ ಟ್ರಸ್ಟ ಬೆಳಗಾವಿ ಇದರ ವತಿಯಿಂದ ಸನ್ 2023–2024 ನೇ ಸಾಲಿನ ಶೈಕ್ಷಣಿಕ ವರ್ಷಕ್ಕಾಗಿ ಪ್ರತಿಶತ 55% ಕ್ಕಿಂತ ಹೆಚ್ಚು ಅಂಕ ಪಡೆದ ಲಿಂಗಾಯತ ವಿದ್ಯಾರ್ಥಿಗಳಿಗೆ ಸಾಲರೂಪದ ವಿದ್ಯಾರ್ಥಿ ವೇತನ ಮಂಜೂರು ಮಾಡುವ ಕುರಿತು ಪ್ರಕಟಣೆ ಹೊರಡಿಸಲಾಗಿದ್ದು, ಅರ್ಹ ವಿದ್ಯಾರ್ಥಿಗಳು ಟ್ರಸ್ಟ ಕಾರ್ಯಾಲಯಕ್ಕೆ ಅರ್ಜಿ ಸಲ್ಲಿಸಬಹುದು.

2) ಅರ್ಜಿ ಫಾರ್ಮಗಳನ್ನು ಟ್ರಸ್ಟ ಕಾರ್ಯಾಲಯದಿಂದ ಖುದ್ದಾಗಿ ಇಲ್ಲವೇ ಅಂಚೆ ಮೂಲಕ ಪಡೆಯಬಹುದು. ಅರ್ಜಿ ಫಾರ್ಮದ ಬೆಲೆ ರೂ.50/– (ಐವತ್ತು ರೂಪಾಯಿಗಳು) ಮಾತ್ರ ಟ್ರಸ್ಟ ಕಾರ್ಯಾಲಯದಲ್ಲಿ ಹಣ ಸಂದಾಯ ಮಾಡಿ ಇಲ್ಲವೇ "ಜಿಲ್ಲಾಧಿಕಾರಿಗಳು ಮತ್ತು ಆಡಳಿತಾಧಿಕಾರಿಗಳು ನವಲಗುಂದ ಶಿರಸಂಗಿ ಟ್ರಸ್ಟ ಬೆಳಗಾವಿ" ಇವರ ಹೆಸರಿನಲ್ಲಿ ಮನಿಯಾರ್ಡರ ಮೂಲಕ ಕಳುಹಿಸಬಹುದು. (Money Order)

3)ಅರ್ಜಿಯ ಜೊತೆಗೆ ಹಿಂದಿನ ವರ್ಷದಲ್ಲಿ ಪಾಸಾದ ಪರೀಕ್ಷೆಯ ಅಂಕಪಟ್ಟಿಗಳ ಹಾಗೂ ಸರ್ಟಿಫಿಕೇಟ ದೃಢೀಕೃತ ನಕಲುಗಳನ್ನು ಇಡತಕ್ಕದ್ದು ಹಾಗೂ ಸಂಬಂಧಿಸಿದ ಅಧಿಕಾರಿಗಳ ಕಡೆಯಿಂದ ಪಾಲಕರ ವಾರ್ಷಿಕ ಆದಾಯ ಪ್ರಮಾಣ ಪತ್ರ ಮತ್ತು ಜಾತಿ ಪ್ರಮಾಣ ಪತ್ರ ಮತ್ತು ಆಧಾರ ಕಾರ್ಡ ಅರ್ಜಿಯ ಸಂಗಡ ಕಳುಹಿಸಬೇಕು.

4)ಅರ್ಜಿಯ ನಮೂನೆಯಲ್ಲಿಯ 8 ನೇ ಕಾಲಂನ್ನು ತಪ್ಪದೇ ಸರಿಯಾಗಿ ತುಂಬತಕ್ಕದ್ದು.

5)ಅರ್ಜಿದಾರನಿಗೆ ಸಾಲರೂಪದ ವಿದ್ಯಾರ್ಥಿ ವೇತನ ಮಂಜೂರಾದ ಹಣದ ಮೊತ್ತದ ಒಂದುವರೆ ಪಟ್ಟು ಹಣವನ್ನು (ಬಡ್ಡಿ ಇಲ್ಲವೇ) ಟ್ರಸ್ಟಿಗೆ 10 (ಹತ್ತು) ವರ್ಷಗಳೊಳಗಾಗಿ ತುಂಬತಕ್ಕದ್ದು.

6)ಇತರೆ ವಿದ್ಯಾರ್ಥಿಗಳು. ಸಾಲರೂಪದ ವಿದ್ಯಾರ್ಥಿ ವೇತನ ಮಂಜೂರಾದ ಪತ್ರವು ತಲುಪುತ್ತಲೇ ವಿದ್ಯಾರ್ಥಿ ಹಾಗೂ ಪಾಲಕರು/ಜಾಮೀನುದಾರರು ಮುಂದೆ ಟ್ರಸ್ಟ ತಿಳಿಸುವ ಮೊತ್ತದ ಜನರಲ್ ಸ್ಟಾಂಪ ಪೇಪರ ಮೇಲೆ ಕರಾರು ಪತ್ರ ಬರೆದು ಅದನ್ನು ಮ್ಯಾಜಿಸ್ಟ್ರೇಟ/ನೋಟರಿ ಮುಂದೆ ಪ್ರಮಾಣ ಮಾಡಿ ಕಳುಹಿಸಬೇಕು.

7)ಸಾಲ ರೂಪದ ವಿದ್ಯಾರ್ಥಿ ವೇತನ ಮಂಜೂರಾದ ಪತ್ರವು ತಲುಪಿದ ನಂತರ ರೂ.50,000/– ರಿಂದ ರೂ.1,00,000/– ಗಳ ವರೆಗು ಸಾಲರೂಪದ ವಿದ್ಯಾರ್ಥಿ ವೇತನ ಪಡೆಯುವ ವಿದ್ಯಾರ್ಥಿಗಳು ಹಾಗೂ ಅವರ ಪಾಲಕರು ರೂ.200/– ಹಾಗೂ ರೂ.49,999/– ಗಳ ಒಳಗಡೆ ಸಾಲರೂಪದ ವಿದ್ಯಾರ್ಥಿ ವೇತನ ಪಡೆಯುವ ವಿದ್ಯಾರ್ಥಿಗಳು ಹಾಗೂ ಅವರ ಪಾಲಕರು ರೂ.100/– ಜನರಲ್ ಸ್ಟಾಂಪ್ ಪೇಪರ ಮೇಲೆ ಕರಾರು ಪತ್ರ ಬರೆದು ಅದನ್ನು ಮ್ಯಾಜಿಸ್ಟ್ರೇಟ/ನೋಟರಿ ಮುಂದೆ ಪ್ರಮಾಣ ಮಾಡಿ ಕಳುಹಿಸಬೇಕು.

8)ಜಾಮೀನ ಆದ ವ್ಯಕ್ತಿಯ ಆಸ್ತಿಯ ಮೇಲೆ ಇಲ್ಲವೇ ಪಾಲಕರ/ಅರ್ಜಿದಾರರ ಆಸ್ತಿಯ ಮೇಲೆ ಮಂಜೂರಾದ ರಕಮಿನ ಒಂದುವರೆ ಪಟ್ಟು ಹಣದ ಬೋಜಾ ದಾಖಲ ಮಾಡಿಸಿ, ಸಂಬಂಧಿತ ಆಸ್ತಿಯ ರಿಕಾರ್ಡ ಆಫ್ ರೈಟ್ಸ ಗೇಣಿ ಮತ್ತು ಪಹಣಿ ಪತ್ರಿಕೆ/ಪ್ರಾಪರ್ಟಿ ರಜಿಸ್ಟರದ ಉತಾರ ಹಾಗೂ ಡಾಯರಿ(MR) ಉತಾರ ಮತ್ತು ಮಂಜೂರಾದ ವಿದ್ಯಾರ್ಥಿ ವೇತನ ಸ್ವೀಕೃತಿ ಬಗ್ಗೆ ಮುಂಗಡ ಪಾವತಿ ಕಳುಹಿಸಿದ ನಂತರ ಸಾಲರೂಪದ ವಿದ್ಯಾರ್ಥಿ ವೇತನವನ್ನು RTGS/NEFT ಮುಖಾಂತರ ವಿದ್ಯಾರ್ಥಿಯ ಬ್ಯಾಂಕ ಉಳಿತಾಯ ಖಾತೆಗೆ ಹಾಕಲಾಗುವದು.

9)ಈ ಹಿಂದಿನ ವರ್ಷಗಳಲ್ಲಿ ಸಾಲರೂಪದ ಶಿಷ್ಯವೇತನ ಪಡೆದದ್ದು ಮುಂದಿನ ವರ್ಷಕ್ಕೆ ಸದರಿ ಸಾಲರೂಪದ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸುವುದಾದಲ್ಲಿ ಇಂತಹ ವಿದ್ಯಾರ್ಥಿ ಕಳೆದ ವರ್ಷ ಕನಿಷ್ಠ 60% ಅಂಕಗಳಿಸಿ ಪಾಸಾಗಿರತಕ್ಕದ್ದು, ಈ ಬಗ್ಗೆ ಕಳೆದ ವರ್ಷದ ಅಂಕಪಟ್ಟಿಯ ದೃಢೀಕೃತ ನಕಲು ಅರ್ಜಿಗೆ ಲಗತ್ತಿಸಬೇಕು.

10) ಅಪೂರ್ಣ ದಾಖಲೆಗಳುಳ್ಳ ಅಥವಾ ಅವಧಿ ಮೀರಿ ಬಂದ ಅರ್ಜಿಗಳನ್ನು ಪರಿಗಣಿಸುವುದಿಲ್ಲ.

ನವಲಗುಂದ ಶಿರಸಂಗಿ ಲಿಂಗರಾಜ ಟ್ರಸ್ಟ ಬೆಳಗಾವಿ

Patink

ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು
ನವಲಗುಂದ ಶಿರಸಂಗಿ ಟ್ರಸ್ಟ ಬೆಳಗಾವಿ

# ನವಲಗುಂದ ಶಿರಸಂಗಿ ಲಿಂಗರಾಜ ಟ್ರಸ್ಟ

## ಹಳೆ ಜಿಲ್ಲಾ ಪಂಚಾಯತ ಕಟ್ಟಡ, ಬೆಳಗಾವಿ.

## ಲಿಂಗಾಯತ ವಿದ್ಯಾರ್ಥಿಗಳಿಗೆ ಸಾಲ ರೂಪದ ವಿದ್ಯಾರ್ಥಿ ವೇತನ



ತ್ಯಾಗವೀರ
ಶಿರಸಂಗಿ ಲಿಂಗರಾಜರು

ಪ್ರತಿ ವರ್ಷ ನವಲಗುಂದ-ಶಿರಸಂಗಿ ಲಿಂಗರಾಜ ಟ್ರಸ್ಟವತಿಯಿಂದ ಲಿಂಗಾಯತ ವಿದ್ಯಾರ್ಥಿಗಳಿಗೆ ಮಾತ್ರ ಉನ್ನತ ಶಿಕ್ಷಣಕ್ಕೆ ಅಂದರೆ M.Sc.(Agri),B.Sc(Agri),M.B.B.S./MS/MD/BAMS/BHMS/BE/ME/MTech./MBA/BBA/BCA/MCA/Diploma in Mechanical, Electricla, Civil Architacture, M.Sc. ವ್ಯಾಸಂಗಕ್ಕಾಗಿ ಸಾಲ ರೂಪದ ವಿದ್ಯಾರ್ಥಿ ವೇತನ ನೀಡಲಾಗುತ್ತದೆ. ಸದರಿ ಅರ್ಜಿಗಳನ್ನು ಪ್ರತಿ ವರ್ಷ ಅಗಷ್ಟ/ ಸೆಪ್ಟೆಂಬರ ತಿಂಗಳಲ್ಲಿ ಆವ್ಹಾನಿಸಿ ಆಯಾ ಕಾಲೇಜುಗಳಿಗೆ ನಮ್ಮ ಟ್ರಸ್ಟ ವತಿಯಿಂದ ಬರೆದು ಈ ವಿಷಯವನ್ನು ನೋಟೀಸ ಬೋರ್ಡಿನಲ್ಲಿ ಪ್ರಸಿದ್ಧಿ ಪಡಿಸಲು ಕೋರಲಾಗುತ್ತದೆ.

ಅರ್ಹರು ನಿಗದಿತ ಅರ್ಜಿಯನ್ನು ನಮ್ಮ ಟ್ರಸ್ಟ ಕಾರ್ಯಾಲಯದಿಂದ ರೂ.30/-ರ ಡಿ.ಡಿ. ಅಥವಾ ಮನಿ ಆರ್ಡರ ಮೂಲಕ ಭರಣಾ ಮಾಡಿ ಖುದ್ದಾಗಿ ಅಥವಾ ಅಂಚೆ ಮೂಲಕ ಪಡೆದು ಟ್ರಸ್ಟಿಗೆ ನೀವು ಓದುತ್ತಿರುವ ವಿದ್ಯಾ ಸಂಸ್ಥೆಯ ಮುಖ್ಯಸ್ಥರ ಮುಖಾಂತರ ಅವಶ್ಯಕ ದಾಖಲೆಗಳಾದ ಲಿಂಗಾಯತ ಅನ್ನುವ ಬಗ್ಗೆ ಲಿವ್ಹಿಂಗ ಸರ್ಟಿಫಿಕೇಟ್ /ಹೋದ ವರ್ಷ ಪಾಸಾದ ಪರೀಕ್ಷೆಯ ಅಂಕ ಪಟ್ಟಿ /ಪಾಲಕರ ಹೆಸರಿನಲ್ಲಿರುವ ಜಮೀನು/ ಮನೆ ಆಸ್ತಿಗಳ ಉತಾರಗಳ ಮೂಲ ಪ್ರತಿ/ಉನ್ನತ ವ್ಯಾಸಂಗಕ್ಕೆ ಪ್ರವೇಶ ಪಡೆದ ಬಗ್ಗೆ ಸೂಕ್ತ ದಾಖಲಾತಿಗಳಾದ ಶುಲ್ಕ ಪಾವತಿಸಿದ ರಸೀದಿಗಳ ದೃಢೀಕೃತ ಪ್ರತಿಗಳೊಂದಿಗೆ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : ಪ್ರತಿವರ್ಷ ಸೆಪ್ಟೆಂಬರ 30 ಇರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಸಂಪರ್ಕಿಸಬಹುದಾಗಿದೆ.


ಜಿಲ್ಲಾಧಿಕಾರಿಗಳು ಹಾಗೂ ಆಡಳಿತಾಧಿಕಾರಿಗಳು
ನವಲಗುಂದ ಶಿರಸಂಗಿ ಟ್ರಸ್ಟ
ಹಳೆ ಜಿಲ್ಲಾ ಪಂಚಾಯತ ಕಟ್ಟಡ (ಡಿ. ಸಿ. ಕಂಪೌಂಡ) ಬೆಳಗಾವಿ-590 001
ದೂರವಾಣಿ- 0831-2425841


ಬೆಳಗಾವಿ. :
ದಿನಾಂಕ : 1-7-2023

ಜಿಲ್ಲಾಧಿಕಾರಿಗಳು ಹಾಗೂ ಆಡಳಿತಾಧಿಕಾರಿಗಳು
ನವಲಗುಂದ ಶಿರಸಂಗಿ ಟ್ರಸ್ಟ
ಬೆಳಗಾವಿ.